

# ಗ್ರಾಮರ್ ಬದಲಾಗಿದೆಯೇ?

ಪ್ರೇಮವೆಂಬುದು ಜೀವನದಿ; ಭಾವನದಿಯೂ ಹೌದು. ಕೆಲವೊಮ್ಮೆ ಉಕ್ಕುಕ್ಕಿ, ಕೆಲವೊಮ್ಮೆ ಲುಪ್ತವಾಗಿ ಗುಪ್ತವಾಗಿ ಹರಿಯುವ ಇದು, ಆಯಾ ಕಾಲದ ರೂಪ ಬಣ್ಣ ವಾಸನೆಗಳನ್ನು ಮೈಗಂಟಿಸಿಕೊಂಡೇ ಮುಂದೆ ಸಾಗುತ್ತದೆ. ಹೊಸ ಕಾಲದ ಪ್ರೇಮದ ಪರಿ ಕೊಂಚ ಬೇರೆ. ತಂತ್ರಜ್ಞಾನದ ಹೊಸ ಜಮಾನಾದಲ್ಲಿ 'ಕಾಯುವಿಕೆ' ಎಂಬ ಶಬ್ದಕ್ಕೆ ಅರ್ಥವಿಲ್ಲ. ಮನಸು ಬಯಸಿದಾಕ್ಷಣ ಮಾತಾಡುವುದು, ಕಾಣುವುದು ಈಗ ಮೊಬೈಲ್ ಎಂಬ ಅಂಗೈ ಅಂಜನದಲ್ಲಿ ಸಾಧ್ಯ. ಈ ಇನ್‌ಸ್ಟಂಟ್ ಕಾಲದ ಫಲವಾಗಿ ಪ್ರೇಮದ ಪರಿಕರಗಳೂ ಬದಲಾಗಿವೆ. ವಿರಹದ ಕಣ್ಣೀರಲ್ಲಿ ತೋಯ್ದು ಬರುತ್ತಿದ್ದ ಪತ್ರಗಳ ಜಾಗದಲ್ಲೀಗ ವಾಟ್ಸ್‌ಆ್ಯಪ್ ಶಾರ್ಟ್‌ಕಟ್ ಭಾಷೆ, ಬಗೆಬಗೆ ಇಮೋಜಿಗಳು ಕೂತಿವೆ. ಈ ಇಮೋಜಿಗಳು ಅಭಿವ್ಯಕ್ತಿಯನ್ನು ಮತ್ತಷ್ಟು ಸುಲಭಶಕ್ತಗೊಳಿಸಿವೆಯೇ? ಅಥವಾ ಅಸೀಮ ಪ್ರೇಮಭಾವವನ್ನು ಕೆಲವೇ ಗುರ್ತುಗಳಿಗೆ ಸೀಮಿತಗೊಳಿಸಿವೆಯೇ? ಹೊಸ ತಂತ್ರಜ್ಞಾನ ಮತ್ತು ಅನಾದಿಕಾಲದಿಂದಲೂ ಮನುಷ್ಯಕುಲವನ್ನು ಪೊರೆಯುತ್ತಲೇ ಇರುವ ಪ್ರೇಮವೆಂಬ ಭಾವ ಎರಡೂ ಪರಸ್ಪರ ವಿರುದ್ಧವೇ ಪೂರಕವೇ?

■ ಪದ್ಮನಾಭ ಭಟ್